ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜುಲೈ ತಾ॥ 2, ಸ್ಯ 1887.

ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಳು, ವಗ್ಗೈರೇರಿಂದ ಕೊಡೋಣಾದ ಇನ್ಸ್ಟ್ರುಮೆಂಟ್ ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟ್ವವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫೇನ್ಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜ್ರೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂ. 469.

ಅರ್ಜೀದಾರ ಶಿರಾ ತಾಲ್ಲೂಕು ದೊಡ್ಡ ಬಾಣಗೆರೆಯಲ್ಲಿರುವ ಶಾನುಭೋಗ ಲಕ್ಷ್ಮೀನರಸಪ್ಪನ ಮಗ ಶಾಮಂಣ.

ಪಟೋ ಬಾಣಗೆರೆಲಿದ್ದು ಮೃತಪಟ್ಟ ಲಕ್ಷ್ಮೀನರಸಪ್ಪನಿಗೆ ಅರ್ಜಿದಾರ ಮಗನಾಗಬೇಕೆಂತಲೂ ಸದರೀ ಮೃತಪಟ್ಟ ಲಕ್ಷ್ಮೀನರಸಪ್ಪನಿಗೆ ಬರಬೇಕಾದ 1,000 ರೂಪಾಯಿ ಸಾಲವನ್ನು ತಾನು ವಸೂಲ್ ಮಾಡಿಕೊಳ್ಳತಕ್ಕ ಬಗ್ಗೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಬೇಕೆಂದು ವಗ್ಗೈರೆ ಕೊಟ್ಟಿರುವ ಅರ್ಜೀ ವಿಮರ್ಶೆ ಬಗ್ಗೆ ಯಿದೇ ಇಸವಿ ಜುಲೈ 27ನೇ ತಾರೀಖಿಗೆ ಹಿಯರಿಂಗ್ ವೊಕರರ್ ಮಾಡಿರುತ್ತೆ.

ಸದರೀ ಮೃತಪಟ್ಟ ಲಕ್ಷ್ಮೀನರಸಪ್ಪನಿಗೆ ಹಕ್ಕುದಾರರಾದ ವಿಷಯ್ಯರೂ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಬೇಕೆಂತ ಇದರಿಂದ ತಿಳಿಯಪಡಿಸಿ ಯಿದೆ.

ತಾರೀಖು 24ನೇ ಜೂ 1887ನೇ ಇಸವಿ.

1887ನೇ ಇಸವಿ ಮಿ|| ಅರ್ಜಿ ನಂಬರ್ 471.

ಅರ್ಜಿದಾರ್ ಬೆಂಗಳೂರು ದೊಡ್ಡಪೇಟೇಲಿರುವ ಕ್ಲೋಸ್‌ಪೇಟೆ ಕರೆಕೊಂಗಯನ ಹೆಂಡತಿ ಲಕ್ಷ್ಮಮ್ಮ.

ಘಾತೀ ಗೋವಿಂದಮ್ಮನ ಮಗ ನರಸಿಹ್ಮಯ್ಯ ಈ ಅರ್ಜಿದಾರಳಿಗೆ ಸವತಿ ಮಗನಾಗಬೇಕೆಂತಲೂ ಡಿಟೋ ನರಸಿಹ್ಮಯ್ಯನ ಹೆಂಡತಿ ಸೊಸೆಯಾಗಬೇಕೆಂತಲೂ ಯಿವರುಗಳಿಗೆ ಬರಬೇಕಾದ 600 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳಲು 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಬೇಕೆಂತ ಕೊಟ್ಟಿರುವ ಅರ್ಜಿ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 8ನೇ ತಾರೀಖಿಗೆ ಹಿಯರಿಂಗ್ ಯಿಟ್ಟುಯಿದೆ, ತಕರಾರ್‌ದಾರ್ರು ಯಾರಾದರು ಯಿದ್ದರೆ ಮೇಲ್‌ಕಂಡ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದಿದೆ.

ತಾರೀಖು 23ನೇ ಜೂ 1887ನೇ ಇಸವಿ.

1887ನೇ ಇಸವಿ ಮಿಸಲೀನಿಯಸ್ ನಂಬರ್ 472.

ಅರ್ಜಿದಾರ್ ಬೆಂಗಳೂರು ಡಿಸ್ಟ್ರಿಕ್ಟ್ ನೆಲವಂಗಲ ತಾಲ್ಲೂಕು ಅಮಲ್‌ದಾರ್ ವಿ. ಎಸ್. ಗೋಪಾಲಯ್ಯಂಗಾರ್ರು.

ಡಿಟೋ ನೆಲವಂಗಲದಲ್ಲಿದ್ದು ಮೃತಪಟ್ಟ ವೆಂಕಟಲಕ್ಷ್ಮಮ್ಮ, ಅರ್ಜಿದಾರರಿಗೆ ಹೆಂಡತಿ ಆಗಬೇಕೆಂತಲೂ ಸದರೀ ಮೃತಪಟ್ಟ ವೆಂಕಟಲಕ್ಷ್ಮಮ್ಮಗೆ ಬರಬೇಕಾದ 2,000 ರೂಪಾಯಿ ಸಾಲವನ್ನು ತಾವು ವಸೂಲ್ ಮಾಡಿಕೊಳ್ಳಲು 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಬೇಕೆಂದು ವಗೈರೆ ಕೊಟ್ಟಿರುವ ಅರ್ಜೀ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 15ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ.

ಸದರೀ ಮೃತಪಟ್ಟ ವೆಂಕಟಲಕ್ಷ್ಮಮ್ಮಗೆ ಹಕ್ಕುದಾರರಾದ ವಿಷ್ಟರೂ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಮಿಸಲೀನಿಯಸ್ ಅರ್ಜಿ ನಂಬರ್ 484.

ಅರ್ಜಿದಾರ್ ಬೆಂಗಳೂರು ರಾಣಾಕಿಂಗನಪೇಟೇಲಿರುವ ಮಣೇದ ದೊಡ್ಡಪುಟ್ಟಣ್ಣನ ಮಕ್ಕಳು 1ನೇ ರಾಮಣ್ಣ 2ನೇ ತಿರಕಪ್ಪ.

ಡಿಟೋ ಪೇಟೇಲಿದ್ದು ಮೃತಪಟ್ಟು ಮಣೇದ ದೊಡ್ಡ ಪುಟ್ಟಣ್ಣನಿಗೆ ಅರ್ಜಿದಾರ್ರು ಮಕ್ಕಳಾಗಬೇಕೆಂತಲೂ ಮೃತಪಟ್ಟ ಪುಟ್ಟಣ್ಣನಿಗೆ ಬರಬೇಕಾದ 500 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕೋಸ್ಕರವೂ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಬೇಕೆಂತ ವಗೈರೆ ಕೊಟ್ಟಿರುವ ಅರ್ಜಿ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 15ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ.

ಸದರೀ ಮೃತಪಟ್ಟ ಪುಟ್ಟಣ್ಣನಿಗೆ ಹಕ್ಕುದಾರರಾದ ವಿಷ್ಟರೂ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ತಾರೀಖು 24ನೇ ಜೂ 1887ನೇ ಇಸವಿ.

ಸಿ. ಕೈಸ್,
ಸಬ್ ಜಡ್ಜ್.